# ನಾಣ್ಯ ವಿಶೇಷ

ಇವು 40 ವರ್ಷಗಳಷ್ಟು ಹಿಂದಿನ ನಾಣ್ಯಗಳು. ಈಗಿನ ತಲೆಮಾರಿನ ಯುವಕ– ಯುವತಿಯರಿಗೆ ಅಂದರೆ 1990ರ ನಂತರ ಹುಟ್ಟಿದವರಿಗೆ ಇದು ವಿಶೇಷವೇ. ಇದರಲ್ಲಿ ಐದು ರೂಪಾಯಿಯ ನಾಣ್ಯವೊಂದಿದ್ದು ಆ ನಾಣ್ಯದ ಮೇಲೆ ಇಂದಿರಾ ಗಾಂಧಿಯವರ ಚಿತ್ರವಿದೆ. 1975– 1982ರವರೆಗಿನ ಒಂದು ರೂಪಾಯಿಯ ನಾಣ್ಯಗಳಿವೆ. 1951ರ ವಿಶೇಷವಾದ ನಾಣ್ಯವೆಂದರೆ ನಾಲ್ಕಾಣೆ ನಾಣ್ಯ. 1988ರ 10 ಪೈಸೆ ನಾಣ್ಯ, 1976ರ 50 ಪೈಸೆಯ ನಾಣ್ಯವನ್ನೂ ಇಲ್ಲಿ ನಾವು ನೋಡಬಹುದು. ಐದು ರೂಪಾಯಿಯ ನಾಣ್ಯದ ಹಿಂಭಾಗದಲ್ಲಿ ಹಲವು ಮಹನೀಯರ ಚಿತ್ರಗಳಿವೆ. ಸದ್ಯಕ್ಕೆ ಐದು ರೂ ನಾಣ್ಯದ ಹಿಂಭಾಗದಲ್ಲಿ ಸಿಂಹದ ಲಾಂಛನವನ್ನು ಹೆಚ್ಚಾಗಿ ಮುದ್ರಿಸಲಾಗುತ್ತಿದೆ. ಈ ನಾಣ್ಯದ ಸಂಗ್ರಹವನ್ನು ನನ್ನ ತಂದೆಯವರು ಮಾಡಿದ್ದರು.

**-ವಿದ್ಯಾಶ್ರೀ ಗಾಣಿಗೇರ, ವಿಜಯಪುರ**





# ಮೊಬೈಲ್ ಸ್ಟೇಷನ್

ಇದು ನನ್ನ ತವರು ಮಲೆನಾಡಿನ ಹಳ್ಳಿಯೊಂದರಲ್ಲಿರುವ ಮೊಬೈಲ್ ಸ್ಟೇಷನ್! ಹುಬ್ಬೇರಿಸಬೇಡಿ! ಕಾಡಿನ ಮಧ್ಯೆ ತಗ್ಗಿನಲ್ಲಿರುವ ಮನೆಯೊಳಗೆ ಜಿಯೋ, ಏರ್‌ಟೆಲ್, ಬಿಎಸ್ಸೆನ್ನೆಲ್ ಯಾರಿಂದಲೂ ಹಲೋ ಎನಿಸಲು ಸಾಧ್ಯವಾಗಿಲ್ಲ. ಮನೆಯ ಹೊರಗೆ ಕೆಲವು ಮೀಟರ್‌ಗಳಾಚೆ ಒಂದೆಡೆ ಮಾತ್ರ ಮೊಬೈಲ್ ನೆಟ್‌ವರ್ಕ್‌ನ ಸಿಗ್ನಲ್ ಸಿಗುತ್ತದೆ. ಹಾಗಾಗಿ ಆ ಸ್ಥಳದಲ್ಲಿ ಈ ರೀತಿ ಕಂಬ, ಪ್ಲಾಸ್ಟಿಕ್ ಡಬ್ಬಿ, ಮಳೆಗೆ ಒದ್ದೆಯಾಗದಿರಲು ಮೇಲೊಂದು ಪ್ಲಾಸ್ಟಿಕ್ ಚಾವಣಿ ಸಿದ್ಧಗೊಳಿಸಿ ಅದರಲ್ಲಿ ಮೊಬೈಲ್ ಪ್ರತಿಷ್ಠಾಪಿಸಿದ್ದಾರೆ. ರಿಂಗ್ ಆದ ತಕ್ಷಣ ರನ್ನಿಂಗ್ ರೇಸ್‌ನಲ್ಲಿ ಓಡುವವರಂತೆ ಓಡುತ್ತಾರೆ. ಇನ್‌ಕಮಿಂಗ್, ಔಟ್‌ಗೋಯಿಂಗ್ ಎಲ್ಲವೂ ಅಲ್ಲಿಯೇ!

**-ಕೆ.ಲೀಲಾ ಶ್ರೀನಿವಾಸ್, ಹರಪನಹಳ್ಳಿ**

# ಸಿಂಕಲ್ಲಿ ಸಸಿ

ಶಾಲೆ ಕಾಲೇಜುಗಳಿಗೆ ಬೇಸಿಗೆ ರಜೆ ಬಂದಿತ್ತು. ಅತ್ತೆ ಮನೆ ದೂರದ ಅರಸೀಕೆರೆ. ಹಾಗಾಗಿ ಕಾಲೇಜಿನಲ್ಲಿ ಉಪನ್ಯಾಸಕಿಯಾಗಿರುವ ನನ್ನವಳು ಈ ರಜೆಗಾಗಿ ಕಾದಿರುತ್ತಾಳೆ, ತವರುಮನೆಗೆ ಹೋಗಲು. ನಮ್ಮ ಮನೆಯ ಪಕ್ಕ ಒಂದಷ್ಟು ಖಾಲಿ ಜಾಗ ಇದೆ. ಅದರಲ್ಲಿ ನಾನಾ ತರಹದ ಹೂ ಹಣ್ಣಿನ ಗಿಡಗಳನ್ನು ಹಾಕಿದ್ದೇವೆ. ಎಲ್ಲವೂ ಬೆಳೆದು ದೊಡ್ಡದಾಗಿದ್ದವು. ಹೂವಿನ ಗಿಡಗಳು ನಾವು ಬರುವ ಒಂದು ತಿಂಗಳವರೆಗೂ ಉಳಿಯುವ ಭರವಸೆ ಇತ್ತು. ಕಾರಣ ಅವು ಬಚ್ಚಲ ನೀರು ಹರಿದು ಹೋಗುವ ಜಾಗದಲ್ಲಿ ಇದ್ದವು.

ರಜೆ ಮುಗಿಸಿ ನಾವು ಮನೆಗೆ ಬಂದಾಗ ಕಂಡು ಬಂದ ಅಚ್ಚರಿ ಈ ಚಿತ್ರದಲ್ಲಿದೆ. ಬಹುಷಃ ಹಿತ್ತಲಿನಲ್ಲಿದ್ದ ಹೂವಿನ ಗಿಡ ನೀರನ್ನು ಅರಸಿ ಹರಿದಾಡಿ ಭೂಗರ್ಭದೊಳಗಿಂದಲೇ ಪಯಣಿಸಿರಬಹುದು. ಅದು ಅಡುಗೆ ಮನೆಯಲ್ಲಿದ್ದ ಕೈತೊಳೆಯುವ ಸಿಂಕಿನಲ್ಲಿ ಮೇಲಕ್ಕೆದ್ದು ಗಿಡವಾಗಿ ಅರಳಿ ನಳನಳಿಸುತ್ತಾ ನಿಂತಿತ್ತು.

**-ರಾಯಲಪಾಡು ರಾಘವೇಂದ್ರ, ಕೋಲಾರ**

